ಹರಿಕಥಾಮೃಥಸಾರ

ಆರೋಹಣ ತಾರತಮ್ಯ ಸಂಧಿ

ಹರಿಕಥಾಮೃಥಸಾರ ಗುರುಗಳ ಕರುಣಧಿಮ್ಧಾಪನಿಥು ಪೇಳುವೆ
ಪರಮ ಭಗವಧ್ಭಕ್ಧರಿಧನಾಧರಧಿ ಕೇಳುವುಧು

ಸಂಧಿ ಸೂಚನೆ:

ಭಕ್ತರೆನಿಸುವ ದಿವ್ಯಪುರುಷರ
ಉಕ್ತಿ ಲಾಲಿಸಿ ಪೇಳ್ದ ಮುಕ್ತಾ
ಮುಕ್ತಜೀವರ ತಾರತಮ್ಯವ ಮುನಿಪ ಶಾಂಡಿಲ್ಯ

ಸ್ಥಾವರರ ನೋಡಲ್ಕೆ ತೃಣ ಕ್ರಿಮಿ
ಜೀವರುತ್ತಮ ಕ್ರಿಮಿಗಳಿಂದಲ
ಜಾವಿ ಗೋ ಗಜ ವ್ಯಾಘ್ರ ಸಿಂಹಗಳಿಂದ ಶೂದ್ರಾದಿ
ಮೂವರುತ್ತಮ ಕಮಕರು ಭೂ
ದೇವರುತ್ತಮ ಕಮಿ ನೋಡಲು
ಕೋವಿದೋತ್ತಮ ಕವಿಗಳಿಂದಲಿ ಇತಿಪರುತ್ತಮರು ೨೫-೦೧

ಧರಣಿಪರ ನೋಡಲ್ಕೆ ನರ ಗಂ
ಧವರುತ್ತಮ ದೇವಗಂಧ
ವರ ಗಣೋತ್ತಮರಿವರಿಗಿಂತ ಶತೋನಶತಕೋಟಿ
ಪರಮಋುಷಿಗಳು ಅಪ್ಸರಸ್ತ್ರೀ

www.yousigma.com

ಯರು ಸಮಾನರು ಇವರಿಗಿಂತಲಿ
ಚಿರಪಿತೃಗಳುತ್ತಮರು ಚಿರನಾಮಕ ಪಿತೃಗಲಿಂದ ೨೫-೦೨

ಎರಡೈದು ಎಂಭತ್ತು ಋಷಿ ತುಂ
ಬುರ ಶತೋವಶಿಯಪ್ಸರಸ್ತ್ರೀ
ಯರು ಶತಾಜಾನಜರು ಉತ್ತಮ ಚಿರಪಿತೃಉಗಳಿಂದ
ವರರು ಊವಷಿಗಿಂತ ವೈಶ್ವಾ
ನರನ ಸುತರೀರೆಂಟು ಸಾವಿರ
ಹರದೆಯರೊಳುತ್ತಮ ಕಶೇರೆಪ್ಪತ್ತುನಾಲ್ಕು ಜನ ೨೫-೦೩

ಸರಿಯೆನಿಪರು ವ್ರಜೌಕಸ ಸ್ತ್ರೀ
ಯರು ಸುರಾಸ್ಯಾತ್ಮಜರಿಗೆ ಪು
ಷ್ಕರನು ಕಮಪ ಪುಷ್ಕರನಿಗೆ ಶನ್ಯೈಶ್ಚರುತ್ತಮನು
ತರಣಿಜನಿಗುತ್ತಮಳುಷಾಶ್ವನಿ
ಸುರರರಸಿಗುತ್ತಮ ಜಲಪ ಬುಧ
ಶರಧಿಜಾತ್ಮಜಗುತ್ತಮ ಸ್ವಾಹಾದೇವಿಯೆನಿಸುವಳು ೨೫-೦೪

ಅನಳಭಾಯಳಿಗಿಂತನಾಖ್ಯಾ
ತನಿಮಿಷರನಾಖ್ಯಾತರಿಂದಲಿ
ಘನಪ ಪಜನ್ಯಾನಿರುದ್ಧನ ಸ್ತ್ರೀ ಉಶಾದೇವಿ
ದ್ಯುನದಿ ಸಂಜ್ಞಾಖ್ಯ ಶ್ಯಾಮಲಾ ರೋ
ಹಿಣಿಗಳಾವರು ಸಮರನಾಖ್ಯಾ
ತನಿಮಿಷೋತ್ತಮರಿವರಿಗಿಂತಲಿ ನೂರು ಕಮಜರು ೨೫-೦೫

www.yousigma.com

ಪೃಥು ನಹುಷ ಶಶಿಬಿಂದು ಪ್ರೀಯ
ವ್ರತ ಪರೀಇತ ನೃಪರು ಭಾಗೀ
ರಥಿಯ ನೋಡಲ್ಕಧಿಕ ಬಲ್ಯಾದಿಂದ್ರ ಸಪ್ತಕರು
ಪಿತೃಗಳೇಳೆಂಟಧಿಕವಪ್ಸರ
ಸತಿಯರೀರ್ರೈಯ್ದೊಂದು ಮನುಗಳು
ದಿತಿಜಗುರು ಚಾವನ ಉಚಥ್ಯರು ಕಮಜರು ಸಮರ ೨೫-೦೬

ಧನಪ ವಿಷ್ವಕ್ಸೇನ ಗಣಪಾ
ಶ್ವಿನಿಗಳೆಂಭತ್ತೈದು ಶೇಷರಿ
ಗೆಣೆಯೆನಿಸುವರು ಮಿತ್ರ ತಾರಾ ನಿರಋತಿ ಪ್ರಾವಹಿ
ಗುಣಗಳಿಂದೈದಧಿಕ ಎಂಭ
ತ್ತೆನಿಪ ಶೇಷರಿಗುತ್ತಮರು ಸ
ನ್ಮುನಿ ಮರೀಚಿ ಪುಲಸ್ತ್ಯ ಪುಲಹ ಕ್ರತು ವಶಿಷ್ಟಮುಖ ೨೫-೦೭

ಅತ್ರಿ ಅಂಗಿರರೇಳು ಬ್ರಹ್ಮನ
ಪುತ್ರರಿವರಿಗೆ ಸಮರು ವಿಶ್ವಾ
ಮಿತ್ರ ವೈವಸ್ವತರು ಈಶಾವೇಶಬಲದಿಂದ
ಮಿತ್ರಗಿಂತುತ್ತಮರು ಸ್ವಾಹಾ
ಭತೃ ಭೃಗುವು ಪ್ರಸುತಿ ವಿಶ್ವಾ
ಮಿತ್ರ ಮೊದಲಾದವರಿಗಿಂತಲಿ ಮೂವರುತ್ತಮರು ೨೫-೦೮

ನಾರದೋತ್ತಮನಗ್ನಿಗಿಂತಲಿ

ವಾರಿನಿಧಿ ಪಾದೋತ್ತಮನು ಯಮ
ತಾರಕೇಶ ದಿವಾಕರರು ಶತರೂಪರುತ್ತಮರು
ವಾರಿಜಾಪ್ತನಿಗಿಂತ ಪ್ರವಹ
ಮಾರುತ್ತೋತ್ತಮ ಪ್ರವಹ
ಮಾರಪುತ್ರನಿರುದ್ಧ ಗುರು ಮನು ದಅ ಶಚಿ ರತಿಯು ೨೫-೦೯

ಆರು ಜನಗಳಿಂದಲಾಹಂ
ಕಾರಿಕಪ್ರಾಣೋತ್ತಮಖಿಳಶ
ರೀರಮಾನಿ ಪ್ರಾಣಗಿಂತಲಿ ಕಾಮ ಇಂದ್ರರಿಗೆ
ಗೌರಿ ವಾರುಣಿ ಖಗಪ ರಾಣಿಗೆ
ಶೌರಿಮಹಿಷಿಯರೊಳಗೆ ಜಾಂಬವ
ತೀ ರಮಾಯುತಳಾದ ಕಾರಣ ಅಧಿಕಳೆನಿಸುವಳು ೨೫-೧೦

ಹರ ಫಣಿಪ ವಿಹಗೇಂದ್ರ ಮೂವರು
ಹರಿಮಡದಿಯರಿಗುತ್ತಮರು ಸೌ
ಪರಣಿಪತಿಗುತ್ತಮರು ಭಾರತಿ ವಾಣಿ ಈವರಿಗೆ
ಮರುತಬ್ರಹ್ಮರು ಉತ್ತಮರು ಇಂ
ದಿರೆಯು ಪರಮೋತ್ತಮಳು ಲಮಿಗೆ
ಸರಿಯೆನಿಸುವವರಿಲ್ಲವೆಂದಿಗು ದೇಶ ಕಾಲದೊಳು ೨೫-೧೧

ಶ್ರೀಮುಕುಮ್ಧನ ಮಹಿಳೆ ಲಕುಮಿಮ ಹಾಮಹಿಮೆಗೇನೆಮ್ಬೆ
ಬ್ರಃಮೇಶಾಮರೇಮ್ದ್ರ ಸೃಷ್ಟಿಸ್ಥಿಥಿಲಯ ಗೈಸಿ ಅವರವರ
ಧಾಮಗಳ ಕಲ್ಪಿಸಿಕೊದುವಳಜ ರಾಮರಣಳಗಿಧ್ಧು

www.yousigma.com

ಸವ ಸ್ವಾಮಿ ಮಮಗುರುವೆಮ್ಧುಪಾಸನೆ ಮಾಳ್ಪಳಚ್ಯುಥನ ೨೫-೧೨

ಈಸು ಮಹಿಮೆಗಳುಳ್ಳ ಲಕುಮಿ ಪ
ರೇಶನಾನಂತಾನಂತಾಂಶಗುಣದೊಳು
ಲೇಶ ಲೇಶಕೆ ಸರಿಯೆನಿಸಳಾವಾವ ಕಾಲದಲಿ
ದೇಶಕಾಲಾತೀತ ಲಕುಮಿಗೆ
ಕೇಶವನ ವಲಸ್ಥಳವೆ ಅವ
ಕಾಶ ವಾಯಿತು ಇವನ ಮಹಿಮೆ ವ್ಯಾಪ್ತಿಗೆಣೆಯುಂಟೆ ೨೫-೧೩

ಒಂದು ರೂಪದೊಳೊಂದವಯವದೊ
ಳೊಂದು ರೋಮದೊಳೊಂದು ದೇಶದಿ
ಪೊಂದಿಕೊಂಡಿಹರಜಭವಾದಿ ಸಮಸ್ತ ಜೀವಿಗಣ
ಸಿಂಧುಸಪ್ತದ್ವೀಪ ಮೇರು ಸು
ಮಂದರಾದ್ರ್ಯಾದಿಗಳು ಬ್ರಹ್ಮ ಪು
ರಂದರಾದಿ ಸಮಸ್ತಲೋಕ ಪರಾಲಯಗಳೆಲ್ಲ ೨೫-೧೪

ಸವದೇವೋತ್ತಮನು ಸವಗ
ಸವಗುಣಸಂಪೂಣ ಸವದ
ಸವತಂತ್ರ ಸ್ವತಂತ್ರ ಸವಾಧಾರ ಸವಾತ್ಮ
ಸವತೋಮುಖ ಸವನಾಮಕ
ಸವಜನಸಂಪೂಜ್ಯ ಶಾಶ್ವತ
ಸವಕಾಮದ ಸವಸಾಇಗ ಸವಜಿತ್ಸವ ೨೫-೧೫

ತಾರತಂಯಾರೋಹಣವ ಬರೆ
ದಾರು ಪಠಿಸುವರವರ ಲಮೀ
ನಾರಸಿಂಹ ಸಮಸ್ತ ದೇವಗಣಾಂತರಾತ್ಮಕನು
ಪೂರಯಿಸುವ ಮನೋರಥಂಗಳ
ಕಾರುಣಿಕ ಕೈವಲ್ಯದಾಯಕ
ದೂರಗೈವ ಸಮಸ್ತದುರಿತವ ವಿಗತಭಯಶೋಕ ೨೫-೧೬

ಪ್ರಣತ ಕಾಮದನಂಘ್ರಿಸಂದರು
ಶನದಪೇಎಗಳುಳ್ಳವಗೆ ನಿ
ಚ್ಚಣಿಕೆಯೆನಿಪುದು ಜಡಮೊದಲು ಬ್ರಹ್ಮಾಂತ ತರತಮವು
ಮನವಚನದಿಂ ಸ್ಮರಿಸುವರ ಭವ
ವನದಿ ಶೋಷಿಸಿ ಪೋಗುವುದು ಕಾ
ರಣವೆನಿಸುವುದು ಜ್ಞ್ಯಾನ ಭಕ್ತಿ ವಿರಕ್ತಿ ಸಂಪದಕೆ ೨೫-೧೭

ದನವೆ ಮೊದಲಾದದರ ಸೂವಾ
ಸನೆಯು ಪ್ರತ್ಪ್ರತ್ಯೇಕ ತೋಪುದು ಎಲ್ಲ ಕಾಲದಲಿ
ದನುಜ ಮಾನವ ದಿವಿಜರವರವ
ರನುಚಿತೋಚಿತ ಕಮ ವೃಜಿನಾ
ದನನು ವ್ಯಕ್ತವ ಮಾಳ್ಪ ತ್ರಿಗುಣಾತೀತ ವಿಖ್ಯಾತ ೨೫-೧೮

ಭಕ್ತವತ್ಸಲ ಭಾಗ್ಯಪುರುಷ ವಿ
ವಿಕ್ತ ವಿಶ್ವಾಧಾರ ಸವೋ
ದ್ರಿಕ್ತ ದೋಷವಿದೂರ ದುಗಮ ದುವಿಭಾವ್ಯ ಸ್ವಹಿ

www.yousigma.com

ಶಕ್ತ ಶಾಶ್ವತ ಸಕಲ ವೇದೈ
ಕೋಕ್ತ ಮಾನದ ಮನ್ಯ ಮಾಧವ
ಸುಕ್ತ ಸುಮಸ್ಥೂಲ ತ್ರಿಜಗನ್ನಾಥ ವಿಟ್ಠಲನು ೨೫-೧೯

www.yousigma.com